**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.1735/2023</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಮಧುಸೂಧನ್ | ಪ್ರಾಸಾ -2 |
| ತಂದೆಯ ಹೆಸರು | : ಲೋಕಯ್ಯ | ಚಾಸಾ-3 |
| ವಯಸ್ಸು | : 29 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕೂಲಿ | ದಿನಾಂಕಃ28.05.2024 |
| ವಾಸಸ್ಥಳ | : ಜಾವಳಿ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರನ್ನು ನಾನು ಈ ಹಿಂದೆ ಜಾವಳಿ ಬಸ್ ಸ್ಟ್ಯಾಪ್ ಬಳಿ ನೋಡಿದ್ದೇನೆ.

ದಿ.10.07.2023 ರಂದು ಮ.ರಾ.12.35 ರ ಸಮಯಕ್ಕೆ ನಾನು ಮತ್ತು ಚಾಸಾ-2 ರವರು ಜಾವಳಿ ಬಸ್ ಸ್ಟ್ಯಾಪ್ ಬಳಿ ಹೋಗುತ್ತಿರುವಾಗ ಚಾಸಾ-1 ರವರು ನಮ್ಮನ್ನು ಕರೆದು ಮಹಜರ್ ಗೆ ಸಹಕರಿಸುವಂತೆ ಕೋರಿ ನೋಟೀಸು ಕೊಟ್ಟರು. ನಾನು ಮತ್ತು ಚಾಸಾ-2 ರವರು ಒಪ್ಪಿ ನೋಟೀಸ್ ಗೆ ಸಹಿ ಮಾಡಿರುತ್ತೇವೆ. ಸದರಿ ಸ್ಥಳದಲ್ಲಿ 1 ರಿಂದ 3 ನೇ ಆರೋಪಿತರು, KA-13-C-9634 ಅಶೋಕ್ ಲೇ ಲ್ಯಾಂಡ್ ಗೂಡ್ಸ ವಾಹನ ಮತ್ತು ಸದರಿ ವಾಹನದ ಒಳಗೆ ಒಂದು ಕಪ್ಪು ಬಣ್ಣದ ಹೋರಿ, ಒಂದು ಕಂದು ಬಣ್ಣದ ಹಸು, 4 ಮೀಟರ್ ಉದ್ದದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗ ಮತ್ತು 5 ½ ಮೀಟರ್ ಉದ್ದದ ಹಳದಿ ಬಣ್ಣದ ಪ್ಲಾಸ್ಟಿಕ್ ಹಗ್ಗ ಇದ್ದವು. ಸದರಿ ವಸ್ತುಗಳೊಂದಿಗೆ ನಮ್ಮನ್ನು ನಿಲ್ಲಿಸಿ ಫೋಟೋ ತೆಗೆದು ಮ.ರಾ.1.00 ರಿಂದ 2.30 ರವರೆಗೂ ಮಹಜರ್ ಕ್ರಮ ಜರುಗಿಸಿ ಸದರಿ ವಸ್ತುಗಳು ಹಾಗೂ ಆರೋಪಿತರನ್ನು ವಶಕ್ಕೆ ಪಡೆದರು. ಜಾವಳಿ ಬಸ್ ಸ್ಟ್ಯಾಂಡ್ ಬಳಿ ಪಕ್ಕದ ರಸ್ತೆಯಲ್ಲಿ ಇದ್ದ ದನಗಳನ್ನು ಆರೋಪಿತರು ಮಾಂಸ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡಲು ತುಂಬಿಕೊಂಡಿರುವುದಾಗಿ ಚಾಸಾ-1 ರವರು ನಮಗೆ ತಿಳಿಸಿದರು.

ಸಾಕ್ಷಿಯು ದಿ.10.07.2023 ರ ನೋಟೀಸು ಮತ್ತು ನಿಪಿ-3 ರ ಮಹಜರ್ ನಲ್ಲಿ ತಮ್ಮ ಸಹಿಗಳನ್ನು ಗುರುತಿಸಿ ನಿಪಿ-4 ರಿಂದ 11 ರಲ್ಲಿ ಕಾಣುವ ವಾಹನ, ಜಾನುವಾರಗಳನ್ನು ಗುರುತಿಸಿ ಸದರಿ ಭಾವಚಿತ್ರಗಳಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಎಂ.ಒ.1 ರಿಂದ 3 ರ ವಸ್ತುಗಳನ್ನು ನೋಡಿ ಅವುಗಳು ಮಹಜರ್ ಕಾಲಕ್ಕೆ ಇದ್ದ ಬಗ್ಗೆ ಗುರುತಿಸುತ್ತಾರೆ. ನೋಟಿಸನ್ನು ನಿಪಿ-12, ಸಾಕ್ಷಿಯ ಸಹಿಯನ್ನು ನಿಪಿ-12(ಎ), ನಿಪಿ-3 ರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಮತ್ತು ಎಂ.ಒ.1 ರ ಮೇಲಿರುವ ಸಾಕ್ಷಿಯ ಸಹಿಯನ್ನು ಎಂ.ಒ.1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ರಿಂದ 3 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಹೆಚ್.ಕೆ.ಡಿ ವಕೀಲರಿಂದಃ</u>**

ನಾನು 10 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ದಿ.10.07.2023 ರಂದು ನಾನು ಕೆಲಸಕ್ಕೆ

ಹೋಗಿದ್ದೆ. ಆ ದಿನ ನನ್ನ ಕೆಲಸ ಸ.5.30 ರ ಸಮಯಕ್ಕೆ ಮುಗಿದಿತ್ತು. ಜಾವಳಿ ಬಸ್ ಸ್ಟ್ಯಾಂಡ್ ನಿಂದ ನಮ್ಮ ಮನೆಗೆ ಸುಮಾರು 150 ಮೀಟರ್ ನಷ್ಟು ಅಂತರ ಇದೆ. ಆ ದಿನ ರಾ.12.45 ರವರೆಗೂ ನಾನು ಮತ್ತು ಚಾಸಾ-2 ರವರು ಜಾವಳಿ ಬಸ್ ಸ್ಟ್ಯಾಂಡ್ ಬಳಿ ಇದ್ದ ನನ್ನ ಸಂಬಂಧಿಕರ ಮನೆಯಲ್ಲಿ ಇದ್ದೆ. ಚಾಸಾ-2 ರವರು ನನ್ನ ದೊಡ್ಡಮ್ಮನ ಮಗ. ನಾವು ನೋಟಿಸಿಗೆ ಸಹಿ ಮಾಡುವಷ್ಟರಲ್ಲಿ 5 ನಿಮಿಷಗಳ ಕಾಲ ಆಗಿತ್ತು. ಆ ಸಮಯಕ್ಕೆ ಆರೋಪಿತರು ಜಾವಳಿ ಬಸ್ ಸ್ಟ್ಯಾಂಡ್ ಬಳಿ ವಾಹನವನ್ನು ನಿಲ್ಲಿಸಿಕೊಂಡಿದ್ದರು. ನಾವು ಜಾವಳಿ ಬಸ್ ಸ್ಟ್ಯಾಂಡ್ ಬಳಿ ಹೋಗುವಷ್ಟರಲ್ಲಿ ಪೋಲಿಸರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿ. ಆ ಸ್ಥಳದಲ್ಲಿ ಪೋಲಿಸರು ಮತ್ತು ಆರೋಪಿತರನ್ನು ಹೊರತುಪಡಿಸಿ ಬೇರೆ ಯಾವ ವ್ಯಕ್ತಿಗಳು ಇರಲಿಲ್ಲ.

ಜಾವಳಿ ಬಸ್ ಸ್ಟ್ಯಾಂಡ್ ಎದುರು ಕೆನರಾ ಬ್ಯಾಂಕ್ ಇದೆ ಎಂದರೆ ಸರಿ. ಜಾವಳಿ ಬಸ್ ಸ್ಟ್ಯಾಂಡ್ ಪಕ್ಕದಲ್ಲಿ ಆಟೋ ಸ್ಟ್ಯಾಂಡ್ ಮತ್ತು ಹಾಸ್ಟೆಲ್ ಇದೆ ಎಂದರೆ ಸರಿ. ಜಾವಳಿ ಬಸ್ ಸ್ಟ್ಯಾಂಡ್ ನಿಂದ ಕೆನರಾ ಬ್ಯಾಂಕ್ ವರೆಗೂ ರಸ್ತೆ ಸಮವಾಗಿದೆ ಎಂದರೆ ಸರಿ. ಸದರಿ ಜಾವಳಿ ಬಸ್ ಸ್ಟ್ಯಾಂಡ್ ನ ಪಕ್ಕದ ಮೇಲ್ಭಾಗದಲ್ಲಿ ಪೋಸ್ಟ್ ಆಫೀಸ್ ಇದೆ ಎಂದರೆ ಸರಿ. ಕೆನರಾ ಬ್ಯಾಂಕ್ ಗೆ ಸಿಸಿ ಟಿವಿ ಅಳವಡಿಸಿದ್ದರೆ ಎಂದರೆ ಸರಿ. ವಾಹನದಲ್ಲಿ ಇದ್ದವು ಎಂದು ಹೇಳಲಾದ ಜಾನುವಾರುಗಳ ಎತ್ತರ ಮತ್ತು ಉದ್ದ ಹೇಳಲಾಗುವುದಿಲ್ಲ. ಆ ದಿನ ಪೋಲಿಸರು ಜಾನುವಾರುಗಳನ್ನು ಅಳತೆ ಮಾಡಿಲ್ಲ. ಹಗ್ಗಗಳನ್ನು ಟೇಪ್ ನಿಂದ ಅಳತೆ ಮಾಡಲಾಗಿದೆ. ಸ್ಥಳದಲ್ಲಿ ಇತ್ತು ಎಂದು ಹೇಳಲಾದ ಹಗ್ಗಗಳು ಹಳದಿ ಬಣ್ಣದ್ದಾಗಿದ್ದು ಅವುಗಳ ಮೂಲಕ ದನಗಳನ್ನು ವಾಹನದಲ್ಲಿ ಕಟ್ಟಿ ಹಾಕಿದ್ದರು. ಸ್ಥಳದಲ್ಲಿ ಇತ್ತು ಎಂದು ಹೇಳಲಾದ ವಾಹನ ಬಾಳೂರಿನ ಕಡೆಗೆ ಅಂದರೆ ಪೂರ್ವದ ಕಡೆ ಮುಖವಾಗಿತ್ತು. ಫೋಟೋಗಳನ್ನು ಚಾಸಾ-1 ರವರ ಮೊಬೈಲ್ ನಲ್ಲಿ ತೆಗೆಯಲಾಗಿದೆ. ಆ ದಿನ ಒಟ್ಟು ಎಷ್ಟು ಜನ ಪೋಲಿಸರು ಸ್ಥಳದಲ್ಲಿ ಇದ್ದರು ಎಂದು ನನ್ನಿಂದ ಹೇಳಲು ಆಗುವುದಿಲ್ಲ.

ಫೋಟೋ ತೆಗೆಯುವಾಗ ನಾನು, ಚಾಸಾ-2, ಆರೋಪಿತರು ಹಾಗೂ ಪೋಲಸರು ನಿಂತಿದ್ದು, ಎಷ್ಟು ಜನ ಪೋಲಿಸರು ಇದ್ದರು ಎಂದು ಈಗ ಹೇಳಲು ಆಗುವುದಿಲ್ಲ. ವಾಹನದಲ್ಲಿ ಇತ್ತು ಎಂದು ಹೇಳಲಾದ ಜಾನುವಾರುಗಳ ವಯಸ್ಸನ್ನು ಹೇಳಲಾಗುವುದಿಲ್ಲ. ನಾನು ದನ ಸಾಕುವುದಿಲ್ಲ. ಸ್ಥಳದಲ್ಲಿ ಇದ್ದ ಜಾನುವಾರುಗಳ ಬೆಲೆಯನ್ನು ನನ್ನ ಅಂದಾಜಿನ ಮೇಲೆ ಹೇಳಿದ್ದೇನೆ. ಸ್ಥಳದಲ್ಲಿ ಇದ್ದ ಗೂಡ್ಸ ವಾಹನಕ್ಕೆ ಟಾರ್ಪಲ್ ನಿಂದ ಬಾಡಿ ಕವರ್ ಮಾಡಿದ್ದರು. ಅಶೋಕ್ ಲೇ ಲ್ಯಾಂಡ್ ಗೂಡ್ಸ ವಾಹನದ ಹಿಂಬದಿಯ ಚಾಸಿ 4 ಅಡಿ ಎತ್ತರದಲ್ಲಿ ಇದೆ ಎಂದರೆ ಸರಿ. ವಾಹನದಲ್ಲಿ ಇತ್ತು ಎಂದು ಹೇಳಲಾದ ಹೋರಿ ಸಂಪೂರ್ಣ ಕಪ್ಪು ಬಣ್ಣದ್ದಾಗಿತ್ತು. ದನಗಳನ್ನು ಇಳಿಸಿ ಫೋಟೋ ತೆಗೆಯಲಾಗಿಲ್ಲ. ಮಹಜರ್ ನ್ನು ಯಾರು ಬರೆದಿದ್ದಾರೆ ಎಂದು ನನಗೆ ನೆನಪಿಲ್ಲ ಹಾಗೂ ಅದನ್ನು ನಾನು ಓದಿಲ್ಲ. ಆ ದಿನ ಪೋಲಿಸರು ನನ್ನ ಎರಡು ಸಹಿಗಳನ್ನು ಪಡೆದಿದ್ದಾರೆ. ಆ ಎರಡು ಸಹಿ ಮಾಡುವಾಗ ಸದರಿ ದಾಖಲೆಗಳನ್ನು ನಾನು ಓದಿ ನೋಡಿಲ್ಲ. ಆ ದಿನ ನಾನು ಪೋಲಿಸ್ ಠಾಣೆಗೆ ಹೋಗಿಲ್ಲ. ಆ ದಿನ ಪೋಲಿಸರು ಸದರಿ ಸ್ಥಳದ ಅಕ್ಕಪಕ್ಕದವರನ್ನು ಕರೆಯಲು ಪ್ರಯತ್ನಿಸಿಲ್ಲ.

ವಾಹನದಲ್ಲಿ ಇತ್ತು ಎಂದು ಹೇಳಲಾದ ದನಗಳು ಸಮಾರು 1 ರಿಂದ 2 ಕ್ವಿಂಟಾಲ್ ತೂಕ ಇದ್ದವು ಎಂದರೆ ಸರಿ. ಮಹಜರ್ ಗೆ ಸಹಿ ಮಾಡುವಾಗ ಮ.ರಾ.1.00 ಗಂಟೆ ಸಮಯವಾಗಿತ್ತು. ಬಾಳೂರು-ಕಳಸ ರಸ್ತೆಯಲ್ಲಿ ವಾಹನಗಳು ಹೆಚ್ಚಾಗಿ ಓಡಾಡುತ್ತಿರುತ್ತವೆ ಎಂದರೆ ಸರಿ. ಮಹಜರ್ ಬರೆಯಲಾಗಿದೆ ಎಂದು ಹೇಳಲಾದ ಸ್ಥಳದ ಚೆಕ್ಕುಬಂದಿ ನನಗೆ ನೆನಪಿಲ್ಲ. ಮಹಜರ್ ನ್ನು ಸ್ಟ್ರೀಟ್ ಲೈಟ್ ಮತ್ತು ಮೊಬೈಲ್ ಪ್ಲ್ಯಾಶ್ ಲೈಟ್ ನಲ್ಲಿ ಬರೆಯಲಾಗಿದೆ. ನಾನು ಆಗಾಗ ಬಾಳೂರು ಪೋಲಿಸ್ ಠಾಣೆಗೆ ಹೋಗಿ ಬರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಕೋರಿಕೆಯಂತೆ ಪೋಲಿಸ್ ಠಾಣೆಯಲ್ಲಿ ನನ್ನ ಸಹಿಗಳನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಭಜರಂಗದಳದ ಹಾಗೂ ಇತರೆ ಸಂಘಟನೆಯ ಸದಸ್ಯನಲ್ಲ. ಪೋಲಿಸರು ಹೇಳಿ ಕೊಟ್ಟ ಹಾಗೇ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಚಾಸಾ-1 ರವರು ನಮ್ಮನ್ನು ಕೃತ್ಯ ನಡೆದಿದೆ ಎಂದು ಹೇಳಲಾದ ಸ್ಥಳಕ್ಕೆ ಕರೆದಿರುವ ವಿಚಾರ, ಅಲ್ಲಿ ಆರೋಪಿತರು, ವಾಹನ ಮತ್ತು ಜಾನುವಾರುಗಳು ಇದ್ದ ವಿಚಾರ, ಅವುಗಳನ್ನು ಪೋಲಿಸರು ವಶಕ್ಕೆ ಪಡೆದರು ಎಂದು ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.